**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>**

**<u>ಸಿಸಿ ನಂಃ 55/2017</u>**

ಪಿ.ಡಬ್ಲ್ಯೂ - 1 : ಜಯಲಕ್ಷ್ಮೀ

**<u>ಮುಂದುವರೆದ ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .</u>**

ಆರೋಪಿ ನನ್ನ ಬಲಮೊಣಕಾಲಿಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ. ಈಗ ನನಗೆ ತೋರಿಸಿದ ಕಲ್ಲಿನಿಂದಲೇ ಆರೋಪಿ ಹಲ್ಲೆ ಮಾಡಿರುತ್ತಾರೆ. ಕಲ್ಲನ್ನು ಮು.ಮ. 1 ಎಂದು ಗುರುತಿಸಲಾಯಿತು. ನಂತರ ನಾನು ಮಳವಳ್ಳಿ ಆಸ್ಪತ್ರೆಗೆ ಹೋಗಿದ್ದು, ಅಲ್ಲಿ ಆಗುವುದಿಲ್ಲ ಎಂದು ಹೇಳಿ, ಮಂಡ್ಯ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಆರೋಪಿ ಬಂದು ಹಲ್ಲೆ ಮಾಡಿ ಹೊರಟು ಹೋಗಿರುತ್ತಾರೆ ನಂತರ ನಾನು ಕೆಳಗೆ ಬಿದ್ದಿದ್ದು, ನನ್ನ ಮೈದುನ ಚಾಸಾ 4 ಮತ್ತು 3 ರವರು ಎತ್ತಿ ಸುಧಾರಿಸಿರುತ್ತಾರೆ. ಮಂಡ್ಯ ಆಸ್ಪತ್ರೆಯಲ್ಲಿ ಮೊದಲಿಗೆ ಸಿಮೆಂಟ್ ಹಾಕಿ ನಂತರ ನನ್ನ ಕಾಲಿಗೆ ಶಸ್ತ್ರಚಿಕಿತ್ಸೆ ಮಾಡ ರಾಡ್‌ನ್ನು ಹಾಕಿರುತ್ತಾರೆ. ನನಗೆ ಈ ಬಗ್ಗೆ ಎಕ್ಸ್‌ರೇ ಮಾಡಿರುತ್ತಾರೆ. ಎಕ್ಸ್‌ರೇ ನನ್ನ ಬಳಿ ಇದ್ದು, ಅದನ್ನು ನಾನು ಹಾಜರುಪಡಿಸಿರುತ್ತೇನೆ.

**<u>ಈ ಹಂತದಲ್ಲಿ ಸಾಕ್ಷಿಯು ಸ.ಸ.ಅ ರವರ ಮೂಲಕ ಮಧ್ಯಂತರ ಅರ್ಜಿಯೊಂದಿಗೆ ಎಕ್ಸ್‌ರೇಗಳನ್ನು ಹಾಜರುಪಡಿಸಿದ್ದು, ಅರ್ಜಿಗೆ ತಕರಾರು ಮತ್ತು ಮುಂದುವರೆದ ಮುಖ್ಯ ವಿಚಾರಣೆಯ ಸಲುವಾಗಿ ಮುಂದೂಡಲಾಯಿತು.</u>**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.